

ಹಾಡುಹಗಲಿನಲ್ಲಿಯೇ ಬಂಡೀಪುರದ ಹೆದ್ದಾರಿಯನ್ನು ದಾಟುತ್ತಿರುವ ಕರಡಿ
ಚಿತ್ರ ಸೌಜನ್ಯ: ಪ್ರವೀಣ್ ಸಿದ್ದಣ್ಣನವರ್

## ದೃಶ್ಯ 1

ನಮ್ಮ ದೇಶದ ಆರ್ಥಿಕತೆ ಹೀಗೆಯೇ ವೃದ್ಧಿಸುತ್ತಿದ್ದರೆ ಈಗ ಏಳರ ಆಸುಪಾಸು ಇರುವ ಜಿಡಿಪಿ ಇನ್ನೈದು ವರ್ಷಗಳಲ್ಲಿ ಒಂಬತ್ತರ ಸಮೀಪ ಸಾಗಬಹುದು ಎನ್ನುವುದು ನಮಗೆ ಸಾಲ ಕೊಡುವ ವಿಶ್ವಬ್ಯಾಂಕಿನ ಕನಸು ಕೂಡಾ ಹೌದು. ಡಿಜಿಟಲ್ ಇಂಡಿಯಾ, ಮೇಕ್ ಇನ್ ಇಂಡಿಯಾದಿಂದ ಹಿಡಿದು ಎಕ್ಸ್‌ಪ್ರೆಸ್ ಹೈವೇ ಕಾರಿಡಾರುಗಳಲ್ಲಿ ನಮ್ಮನ್ನು ಓಡಾಡಿಸಿ, ಬುಲೆಟ್ ರೈಲು ಹತ್ತಿಸಿ, ಚಿಕ್ಕಪುಟ್ಟ ನಗರಗಳಿಗೆ ಹೋಗಲೂ ವಿಮಾನದಲ್ಲಿ ಹಾರಾಡಿಸುವವರೆಗೆ ಇಷ್ಟೆಲ್ಲ ತರಹೇವಾರಿ ಅಭಿವೃದ್ಧಿ ಯೋಜನೆಗಳು ಜಾರಿಯಾಗುತ್ತಿರುವಾಗ ಜಿಡಿಪಿ ಏರದಿರಲು ಸಾಧ್ಯವೇ? ಸಿಲಿಕಾನ್ ಸಿಟಿಯಿಂದ 'ಸ್ಟಾರ್ಟ್ ಅಪ್ ನಗರ' ಎಂಬ ಅಭಿದಾನಕ್ಕೆ ಪಾತ್ರವಾಗಿರುವ ಬೆಂಗಳೂರಿನಲ್ಲಿ ಇನ್ನಷ್ಟು ನವೋದ್ಯಮಗಳು, ಲಕ್ಷಾಂತರ ಕೆಲಸಗಾರರು ಬೀಡು ಬಿಡುತ್ತಾರೆ. ಅಭಿವೃದ್ಧಿ ಸೋಪಾನದ ಈ ಯಾವುದನ್ನಾದರೂ ತಪ್ಪು ಎಂದು ಹೇಳಲು ಸಾಧ್ಯವೇ?

ಇದರ ಪರಿಣಾಮವಾಗಿ ಎಲ್ಲರ ಕೈಯಲ್ಲಿ 'ಕುರುಡು ಕಾಂಚಾಣ ಕುಣಿಯುತ್ತಿರುತ್ತದೆ'! ಕಾಂಚಾಣ ಝಣಝಣ ಎನ್ನುತ್ತಿರುವಂತೆ ವಾರವಿಡೀ ದುಡಿದ ಆಯಾಸ ಪರಿಹಾರಕ್ಕೆ ವಾರಾಂತ್ಯದ ಮೋಜುಮಸ್ತಿ ಬೇಕೆನ್ನಿಸುತ್ತದೆ. ಹಾಗೆ ಹೋಗಲು ಬೆಂಗಳೂರು, ಮೈಸೂರಿಗರಿಗೆ ತುಸು ಹತ್ತಿರದ ತಾಣಗಳೆಂದರೆ ಬಂಡೀಪುರ, ನಾಗರಹೊಳೆ, ಊಟಿ, ವಯನಾಡ್. ಇನ್ನು ಬೆಂಗಳೂರು, ಮೈಸೂರಿನಲ್ಲಿ ಕೆಲಸ ಮಾಡುವ ಕೇರಳಿಗರು ತಮ್ಮೂರ ಕಡೆ ತೆರಳಲು ಬಂಡೀಪುರ ಮಾರ್ಗವಾಗಿಯೇ ಹೋಗಬೇಕಲ್ಲ? ರಾತ್ರಿ ಒಂಬತ್ತರ ಒಳಗೆ ಬಂಡೀಪುರ ಚೆಕ್‌ಪೋಸ್ಟ್ ದಾಟಬೇಕು. ಅದಾಗಲಿಲ್ಲ ಎಂದರೆ ಬೆಳಿಗ್ಗೆ ಆರರ ನಂತರ ಚೆಕ್‌ಪೋಸ್ಟ್ ತೆರೆದ ನಂತರವೇ ಆ ಕಡೆ ದಾಟಲು ಸಾಧ್ಯ.

**2004ರಿಂದ 2009ರವರೆಗೆ ಅಂದರೆ 6 ವರ್ಷಗಳ ಅವಧಿಯಲ್ಲಿ ಬಂಡೀಪುರದೊಳಗೆ ಸಾಗುವ ಹೆದ್ದಾರಿಯಲ್ಲಿ ಒಟ್ಟು 93 ಅಪಘಾತದ ಸಾವುಗಳು ಆಗಿವೆ. 2007ರಲ್ಲಿ ಅತ್ಯಧಿಕ 41 ಪ್ರಾಣಿಗಳು ಮತ್ತು 2004ರಲ್ಲಿ 32 ಪ್ರಾಣಿಗಳು ಸತ್ತಿವೆ!**

ಒಮ್ಮೆ ಹಗಲಾಯಿತೆಂದರೆ ಬಂಡೀಪುರದ ಎದೆ ಸೀಳಿ ಸಾಗುವ ರಾಷ್ಟ್ರೀಯ ಹೆದ್ದಾರಿ 212 (ಈಗ 766) ಮತ್ತು ರಾಷ್ಟ್ರೀಯ ಹೆದ್ದಾರಿ 67ರಲ್ಲಿ ಇಡೀ ದಿನ ವಾಹನಗಳ ಭರಾಟೆ ಮಹಾನಗರಗಳ ಟ್ರಾಫಿಕನ್ನೂ ನಾಚಿಸುವಷ್ಟಿರುತ್ತದೆ. ಏಕೆಂದರೆ ಬಂಡೀಪುರ ರಾಷ್ಟ್ರೀಯ ಉದ್ಯಾನದ ಮೂಲಕ ಹಾದುಹೋಗುವ ಈ ಎರಡೂ ಹೆದ್ದಾರಿಗಳಲ್ಲಿ ರಾತ್ರಿ ಒಂಬತ್ತರಿಂದ ಬೆಳಗ್ಗೆ ಆರು ಗಂಟೆಯವರೆಗೆ ಸಂಚಾರ ನಿಷೇಧವಿದೆ. ಎಲ್ಲ ವಾಹನಗಳೂ ಸಾಲಾಗಿ ಬೆಳಿಗ್ಗೆ ಹೊರಡುತ್ತವೆ. ಇಲ್ಲಿ ರಾತ್ರಿ ಸಂಚಾರ ನಿಷೇಧ ಹೀಗೆಯೇ ಇದ್ದರೆ ಈ ಸದ್ಯದ ದೃಶ್ಯವೇ ಮುಂದುವರೆಯಬಹುದು.

## ದೃಶ್ಯ 2

ಈಗ, ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ತನ್ನ ಹೊಸ ಪ್ರಸ್ತಾವನೆಯಲ್ಲಿ ನಮ್ಮ ಕಣ್ಣೆದುರು ಕಾಗದದ ಮೇಲೆ ಚಿತ್ರಿಸಿರುವ 'ಸ್ವರ್ಗ ಸದೃಶ ದೃಶ್ಯ'ವನ್ನು ನೋಡೋಣ.

ಬಂಡೀಪುರದ ಒಳಗೆ 27 ಕಿ.ಮೀ. ಉದ್ದ ಸಾಗುವ ಹೆದ್ದಾರಿ ಈಗಿರುವ 7 ಮೀಟರ್‌ಗಳಿಂದ, 15 ಮೀಟರ್ ಅಗಲವಾಗಿದ್ದು, ಎರಡು ಲೇನ್ ಆಗಿದೆ! ಮಧ್ಯದಲ್ಲಿ ಒಂದೊಂದು ಕಿ.ಮೀ. ಉದ್ದದ ನಾಲ್ಕು ಎಲಿವೇಟೆಡ್ ಕಾರಿಡಾರು (ಎತ್ತರಿಸಿದ ಮೇಲುಸೇತುವೆ) ಗಳಿವೆ. ಕಾರಿಡಾರುಗಳ ಕೆಳಗೆ ವನ್ಯಜೀವಿಗಳು ಆರಾಮಾಗಿ ಓಡಾಡಲು ಅನುಕೂಲವಾಗುವಂತೆ ಮಾಡಲಾಗಿದೆ. ಇನ್ನುಳಿದ ಕಡೆ ವನ್ಯಜೀವಿಗಳು ಹೆದ್ದಾರಿಗೆ ಅಡ್ಡ ಬಾರದಂತೆ



